# ಅಂತಃಸುಖ

**ಒಂದು** ಸುಂದರ ಹುಣ್ಣಿಮೆಯ ರಾತ್ರಿ. ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿದೆ. ಸ್ನೇಹಿತರಿಬ್ಬರು ಒಂದು ಸರೋವರದ ಹತ್ತಿರ ಬಂದರು. ಸರೋವರದ ನೀರು ತಿಳಿಯಾಗಿತ್ತು, ಅಲೆಗಳಿರಲಿಲ್ಲ. ಆ ಸ್ನೇಹಿತರಲ್ಲಿ ಒಬ್ಬನು ನೀರು ಕುಡಿಯುವುದಕ್ಕಾಗಿ ಸರೋವರದ ಸಮೀಪ ಹೋದನು.



ಬೊಗಸೆಯಲ್ಲಿ ನೀರನ್ನು ಕುಡಿಯಲು ಬಗ್ಗಿದಾಗ ನೀರಿನಲ್ಲಿ ಒಂದು ಸುಂದರ ದೃಶ್ಯ ಅವನಿಗೆ ಕಾಣಿಸಿತು. ಅಪೂರ್ವ ದೃಶ್ಯ—ಚಂದ್ರನು ನೀರಿನೊಳಗೆ ನಗುತ್ತಿರುವಂತಿದೆ. ಸುತ್ತಲೂ ವಿವಿಧ ಭಂಗಿಯ ಮೋಡಗಳು ಕಾಣಿಸುತ್ತಿವೆ, ದೂರದಲ್ಲಿ ನಕ್ಷತ್ರಗಳು ಮಿನುಗುತ್ತಿವೆ.

ಆ ವ್ಯಕ್ತಿಯು ಆ ದೃಶ್ಯವನ್ನು ನೋಡುತ್ತ ಮೈ ಮರೆತನು. ನೀರು ಕುಡಿಯಲು ಸರೋವರಕ್ಕೆ ಕೈ ಹಾಕಿದರೆ ಆ ದೃಶ್ಯ ವಿಕೃತವಾಗುತ್ತಿದೆ. ಅವನು ಹಾಗೆಯೋ ನಿಂತುಕೊಂಡು ನೋಡುತ್ತಿದ್ದನು. ಬಹಳ ಹೊತ್ತು ಕಳೆಯಿತು.

ಅಷ್ಟರಲ್ಲಿ ಒಂದು ದೊಡ್ಡ ಮೀನು ಅತ್ತಕಡೆ ಧಾವಿಸಿ ಬಂತು. ನೀರು ಅಸ್ತವ್ಯಸ್ತವಾಯಿತು. ದೃಶ್ಯ ಕಣ್ಮರೆಯಾಯಿತು. ಈಗ ಅವನು ನೀರನ್ನು ಕುಡಿದನು. ಒಮ್ಮೆ ತಲೆ ಎತ್ತಿ ಆಕಾಶದ ಕಡೆನೋಡಿದ. ಅದೇ ಸುಂದರ ದೃಶ್ಯ ಇನ್ನೂ ಶೋಭಾಯಮಾನವಾಗಿ ಕಾಣುತ್ತಿದೆ. ಅದು ಯಾವ ಬಾಧೆಗೂ ಒಳಗಾಗದೆ ತಾನೇ ತಾನಾಗಿ ಶೋಭಿಸುತ್ತಿದೆ. ಈ ಮೂಲ ದೃಶ್ಯವನ್ನು ಮರೆತು ಆ ಪ್ರತಿಬಿಂಬಕ್ಕೆ ಮನಸೋತೆನಲ್ಲ ಎಂದು ಅವನು ತನ್ನನ್ನು ತಾನೇ ಹಳಿದುಕೊಂಡನು.

**ನಾವೂ ಹೀಗೆಯೆ ಇಂದ್ರಿಯ ವಿಷಯಗಳಲ್ಲಿ ಸುಖವನ್ನು ಅರಸುತ್ತೇವೆ. ಅದು ಅಂತಃಸುಖದ, ಆತ್ಮಸುಖದ ಪ್ರಬಿಂಬ ಅಷ್ಟೇ. ಅದು ಚಂಚಲವಾದುದು, ಕ್ಷಣಿಕ. ಅನೇಕ ವಿಷಯಗಳು ಅದನ್ನು ಬಾಧಿಸುತ್ತವೆ ಆದರೆ ಮೂಲ ಅಂತಸುಖ ಅಬಾಧಿತ. ಅದು ಯಾವಾಗಲೂ ನಮ್ಮೊಂದಿಗಿರುತ್ತದೆ.**